ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಂದುವರೆದ ಪಾಟೀ ಸವಾಲುಃ- **Sri. P.K.S.** ವಕೀಲರಿಂದ ಆರೋಪಿಯ ಪರವಾಗಿ

17. ನಿಪಿ-7ರ ದಾಖಲಾತಿಯು ದಿಃ27.08.2024ರಂದು ನನ್ನ ಠೇವಣಿ ಹಣದಿಂದ ಶ್ರೀರಾಮ ಸೊಸೈಟಿಯವರು ಎಸ್ ಡಿಸಿಸಿ ಬ್ಯಾಂಕಿನಲ್ಲಿ ಹೊಂದಿರುವ ಖಾತೆಗೆ ವರ್ಗಾವಣೆಯಾದ ಹಣದ ಬಗ್ಗೆ ರುಜುವಾತುಪಡಿಸುತ್ತದೆ. ನಿಪಿ-6ರ ದಾಖಲಾತಿಯು ನೀವು ಶ್ರೀರಾಮ ಸಹಕಾರ ಸಂಘದಲ್ಲಿ ಹೊಂದಿರುವ ಉಳಿತಾಯ ಖಾತೆಗೆ ಹಣ ವರ್ಗಾವಣೆಯಾದ ಬಗ್ಗೆ ರುಜುವಾತುಪಡಿಸುತ್ತದೆ ಎಂದರೆ ಸಾಕ್ಷಿಯು ನಾನು ಶ್ರೀರಾಮ ಸಹಕಾರ ಸಂಘದಲ್ಲಿ ಖಾತೆ ಹೊಂದಿಲ್ಲ ಎಂದು ಹೇಳುತ್ತಾರೆ. ನಿಡಿ-1 ನಿಮ್ಮ ಖಾತೆ ಎಂದರೆ ನನಗೆ ಗೊತ್ತಾಗುವುದಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಿಡಿ-1ರ ಪ್ರಕಾರ ರೂ.2ಲಕ್ಷ ನಿಮ್ಮ ಖಾತೆಗೆ ಜಮೆಯಾಗಿರುವುದು ಕಂಡು ಬರುತ್ತದೆ ಎಂದರೆ ಸಾಕ್ಷಿಯು ಶ್ರೀರಾಮ ಸಹಕಾರ ಸಂಘದಲ್ಲಿ ಖಾತೆಯನ್ನೇ ಹೊಂದಿಲ್ಲ ಎಂದು ಹೇಳುತ್ತಾರೆ. ಸುಮಾರು 10-15 ವರ್ಷಗಳ ಕಾಲ ನಾನು ಶ್ರೀರಾಮ ಸಹಕಾರ ಸಂಘದಲ್ಲಿ ವ್ಯವಹಾರ ಮಾಡುತ್ತಿದ್ದೆ, ಆದರೆ ಈ ವ್ಯವಹಾರ ಆಗುವ ಒಂದು ವರ್ಷದ ಮೊದಲೇ ನಾನು ಸದರಿ ಸಂಘದಿಂದ ವ್ಯವಹಾರ ಬಿಟ್ಟಿದ್ದೆ. ಒಂದು ವರ್ಷದ ಪೂರ್ವದಲ್ಲಿ ಎಸ್ ಬಿ ಖಾತೆಗೆ ಹಣ ಜಮೆ ಮಾಡುತ್ತಿದ್ದೆ, ಅವರು ಕೊಡುತ್ತಿರಲಿಲ್ಲ. ಸಹಕಾರ ಸಂಘದ ಚೆಕ್ ಪುಸ್ತಕವನ್ನು ನಾನು ಹೊಂದಿರುವುದಿಲ್ಲ. ವೋಚರ್ ಮೂಲಕ ನಾನು ಹಣವನ್ನು ನಗದೀಕರಿಸುತ್ತಿದ್ದೆ.

ಮರುವಿಚಾರಣೆಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)**

ಓ.ಹೇ.ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬೆಳ್ತಂಗಡಿ